**ದಿನಾಂಕ 24.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ: ಶ್ರೀ. ಸಿ.ವಿ.ಎಸ್. ವಕೀಲರಿಂದಃ-**

ನನ್ನ ತಂದೆಯ ಹೆಸರು ಪ್ರಭಯ್ಯ. ನನ್ನ ತಂದೆ ಪ್ರಭಯ್ಯನವರಿಗೆ ಒಟ್ಟು 08 ಜನ ಮಕ್ಕಳಿರುತ್ತಾರೆ. ಅವರುಗಳೆಂದರೆ ರುದ್ರಯ್ಯ, ರತ್ನಮ್ಮ, ಮಹೇಶ್ವರಯ್ಯ, ಕಮಲಮ್ಮ, ಚಂದ್ರಶೇಖರ್, ಕುಮಾರಸ್ವಾಮಿ, ಮರುಗೇಂದ್ರಯ್ಯ ಮತ್ತು ರುದ್ರಮ್ಮ ಅಂದರೆ ನಾನು. ರುದ್ರಯ್ಯ ಮತ್ತು ಅವರ ಹೆಂಡತಿ ಚಂದ್ರಮ್ಮನವರು ಬದುಕಿರುವುದಿಲ್ಲ. ರುದ್ರಯ್ಯ ಮತ್ತು ಚಂದ್ರಮ್ಮರವರಿಗೆ 04 ಜನ ಮಕ್ಕಳಿರುತ್ತಾರೆ. ಅವರುಗಳೆಂದರೆ ನೀಲಕಂಠಯ್ಯ, ಶಿವಕುಮಾರ್, ಮಮತ ಮತ್ತು ಪ್ರೇಮ ಆಗಿರುತ್ತಾರೆ. ಅದರಲ್ಲಿ ನೀಲಕಂಠಯ್ಯ ಮತ್ತು ಶಿವಕುಮಾರ್ ಮರಣ ಹೊಂದಿರುತ್ತಾರೆ. ನೀಲಕಂಠಯ್ಯನವರಿಗೆ ಒಬ್ಬರೇ ಮಗಳಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಅವರ ಹೆಸರನ್ನು ನನಗೆ ಈಗ ಹೇಳಲಾಗುವುದಿಲ್ಲ. ಶಿವಕುಮಾರ್ ರವರ ಹೆಂಡತಿಯ ಹೆಸರು ಕವಿತಾ ಆಗಿರುತ್ತಾರೆ. ಅವರಿಗೆ ಮಕ್ಕಳಿರುತ್ತಾರೆ, ಆದರೆ ಅವರು ಎಷ್ಟು ಜನ ಮತ್ತು ಅವರುಗಳ ಹೆಸರು ನನಗೆ ಗೊತ್ತಿಲ್ಲ. ಶಿವಕುಮಾರ್ ರವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ.

ಪ್ರಭಯ್ಯನವರ ಮಗಳಾದ ರತ್ನಮ್ಮನವರು ಮರಣ ಹೊಂದಿರುತ್ತಾರೆ. ರತ್ನಮ್ಮನವರ ಗಂಡನಾದ ಮುರುಗೇಂದ್ರಯ್ಯನವರು ಸಹ ಮರಣ ಹೊಂದಿರುತ್ತಾರೆ. ಸದರಿವರಿಗೆ 04 ಜನ ಮಕ್ಕಳು. ಅವರುಗಳೆಂದರೆ ರೇಣುಕಾ, ಓಂಕಾರ, ಕುಮಾರಸ್ವಾಮಿ ಮತ್ತು ಹೇಮಾವತಿ ಆಗಿರುತ್ತಾರೆ. ಅದರಲ್ಲಿ ಕುಮಾರಸ್ವಾಮಿ ಮತ್ತು ಹೇಮಾವತಿ ಮರಣ ಹೊಂದಿರುತ್ತಾರೆ. ಕುಮಾರಸ್ವಾಮಿ ಮತ್ತು ಹೇಮಾವತಿಯವರಿಗೆ ಮಕ್ಕಳು ಇದ್ದು, ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ಕುಮಾರಸ್ವಾಮಿರವರಿಗೆ ಒಬ್ಬ ಗಂಡು ಮಗನಿದ್ದು, ಹೇಮಾವತಿಯವರಿಗೆ ಒಬ್ಬ ಗಂಡು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರತ್ನಮ್ಮರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಯಾವ-ಯಾವ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದು ನಾನು

ಕೇಳಿ ತಿಳಿದುಕೊಂಡಿರುತ್ತೇನೆ. ಕುಮಾರಸ್ವಾಮಿ ಮತ್ತು ಹೇಮಾವತಿರವರ ವಾರಸುದಾರರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಶಿವಕುಮಾರ್ ರವರ ಹೆಂಡತಿ ಕವಿತಾರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದು, ಅವರ ಮಕ್ಕಳನ್ನು ಈ ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ನಾನು 01 ಎಕರೆ 38 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ನನ್ನ ತಮ್ಮ ಕುಮಾರಸ್ವಾಮಿ ಮತಿಘಟ್ಟ ವಾಸವಾಗಿದ್ದು, ಈಗ ಮರಣ ಹೊಂದಿರುತ್ತಾರೆ. ಅವರಿಗೆ 03 ಜನ ಮಕ್ಕಳಿದ್ದು, ಅವರುಗಳೆಂದರೆ ರೇಖಾ, ಶೈಲ ಮತ್ತು ಸುನಿಲ್ ಎಂಬುವವರಾಗಿರುತ್ತಾರೆ. ಸದರಿಯವರು ನನ್ನೊಂದಿಗೆ ವಿಶ್ವಾಸದಿಂದ ಇರುತ್ತಾರೆ. ಕುಮಾರಸ್ವಾಮಿರವರು ಮತಿಘಟ್ಟದಲ್ಲಿ ವಾಸ ಇದ್ದ ಮನೆ ನನ್ನ ತಂದೆ ಪ್ರಭಯ್ಯನವರಿಂದ ಬಂದ ಸ್ವತ್ತಾಗಿರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಏಕೆಂದರೆ ಗ್ರಾಮ ಪಂಚಾಯಿತಿಯಲ್ಲಿ ದಾಖಲೆಯನ್ನು ಕೊಡದೇ ಇದ್ದುದ್ದರಿಂದ ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಕುಮಾರಸ್ವಾಮಿಯವರು ವಾಸವಿದ್ದ ಮನೆ ಈಗಲೂ ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆ ಪ್ರಭಯ್ಯನವರ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಕೇವಲ ಜಮೀನಿನ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ದಾವಾ ಆಸ್ತಿಯಲ್ಲಿ ನಮ್ಮ ಕುಟುಂಬದ ಎಷ್ಟು ಜನ ಮರಣ ಹೊಂದಿದವರನ್ನು ಹೂಳಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ನಮ್ಮ ಊರಿನಲ್ಲಿ ಮಠದ ಹೊಲ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನನ್ನ ಮದುವೆಗಿಂತ ಮುಂಚೆ ನೋಡಿರುತ್ತೇನೆ. ನನ್ನ ವಿವಾಹವಾಗಿ ಸುಮಾರು 40 ವರ್ಷ ಮೇಲಾಗಿರುತ್ತದೆ. ಸದರಿ ದಾವಾ ಆಸ್ತಿಯಲ್ಲಿ ನನ್ನ ತಾಯಿ ಚನ್ನಮ್ಮ, ತಂದೆ ಪ್ರಭಯ್ಯ, ನನ್ನ ಸಹೋದರರಾದ ಚಂದ್ರಶೇಖರಯ್ಯ, ಮುರುಗೇಂದ್ರಸ್ವಾಮಿ, ಕುಮಾರಸ್ವಾಮಿ ಹಾಗೂ ನನ್ನ ಸಹೋದರರ ಮಕ್ಕಳಾದ ದೇವಿರಮ್ಮ ಮತ್ತು ಪ್ರೇಮರವರ ಸಮಾಧಿ ಇರುತ್ತದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಗಂಡನ ಹೆಸರು ಚಂದ್ರಶೇಖರ್ ಆಗಿರುತ್ತದೆ. ಸದರಿ ಚಂದ್ರಶೇಖರರವರು ಮರಣ ಹೊಂದಿದ್ದು, ಅವರ ಸಮಾಧಿಯು ಸಹ ದಾವಾ ಆಸ್ತಿಯಲ್ಲಿ

ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರಭಯ್ಯನವರು ಬದುಕಿದ್ದಾಗಲೇ 1 ನೇ ಪ್ರತಿವಾದಿಯ ಗಂಡನಾದ ಚಂದ್ರಶೇಖರ್ ರವರಿಗೆ ನೀಡಿ ನಮ್ಮ ಕುಟುಂಬದಲ್ಲಿ ಯಾರೇ ಮರಣ ಹೊಂದಿದರು ಅಲ್ಲಿ ಸಮಾಧಿ ಮಾಡುವಂತೆ ತಿಳಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಮರಣ ಹೊಂದಿದವರಾದ ತಂದೆ–ತಾಯಿ, ಇತರರಿಗೆ ನಾನು ಹೋಗಿ ಪೂಜೆ ಮಾಡಿರುವುದಿಲ್ಲ. ನಾನು ಹೋಗಿ ನನ್ನ ಕುಟುಂಬದಲ್ಲಿ ಮರಣ ಹೊಂದಿದ ಸದಸ್ಯರುಗಳಿಗೆ ಜಮೀನಿನಲ್ಲಿ ಪೂಜೆ ಮಾಡಿಲ್ಲದೆ ಇರುವುದರಿಂದಲೇ ದಾವಾ ಆಸ್ತಿಯಲ್ಲಿ ನನಗೆ ಅರಿವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು ಮರಣ ಹೊಂದಿದವರಿಗೆ ಸಮಾಧಿ ಮಾಡು ಬಿಟ್ಟಿರುವುದರಿಂದಲೇ ನಾವು ಅದರಲ್ಲಿ ಹಿಸ್ಸೆಯನ್ನು ಕೇಳದೆ ಬೇಡವೆಂದು ಬಿಟ್ಟಿದ್ದರೂ ಸಹ ಈಗ ಪುನಃ ಹಿಸ್ಸೆಯನ್ನು ಕೇಳಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ, ಪ್ರತಿವಾದಿ ಮತ್ತು ಅವರ ಮಕ್ಕಳೊಂದಿಗೆ ವಿಶ್ವಾಸ ಇರುವುದಿಲ್ಲ ಎಂದರೆ ಸರಿ. ನಾನು ಸದರಿಯವರೊಂದಿಗೆ ವಿಶ್ವಾಸದಿಂದ ಇಲ್ಲದೆ ಇರುವುದರಿಂದಲೇ ಹೊಟ್ಟೆಕಿಚ್ಚಿನಿಂದಲೇ ಈ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕುಮಾರಸ್ವಾಮಿಯವರ ಮಗ ಸುನಿಲ ಮತ್ತು ಅವರ ಹೆಂಡತಿ ಸವಿತಾರವರೊಂದಿಗೆ ನಾನು ವಿಶ್ವಾಸದಿಂದ ಇರುವುದರಿಂದಲೇ ಅವರು ವಾಸವಿರುವ ಮನೆಯನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಸಮಾಧಿಗಳು ಇದೆಯೋ ಇಲ್ಲವೋ ಎಂಬುದನ್ನು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ಅದನ್ನು ಪರಿಶೀಲಿಸಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ಚಂದ್ರಶೇಖರ್ ರವರ ಹೆಂಡತಿ ಮತ್ತು ಮಕ್ಕಳೊಂದಿಗೆ ನಾನು ವಿಶ್ವಾಸದಿಂದ ಇಲ್ಲದೆ ಇರುವುದರಿಂದ ಎಂದಿಗೂ ನಾನು ಸದರಿಯವರನ್ನು ಹಿಸ್ಸೆ ಕೊಡಿ ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿಯವರನ್ನು ಹಿಸ್ಸೆ ಕೋರಿ ಸುಮಾರು 02–03 ವರ್ಷಗಳು ಕಳೆದಿರುತ್ತದೆ. ನಾನು ನನ್ನ ವಿವಾಹವಾದ 40 ವರ್ಷಗಳಿಂದ ದಾವಾ ಆಸ್ತಿಯಲ್ಲಿ ವಿಭಾಗವನ್ನು ಕೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಮರಣ ಹೊಂದಿದ ನಂತರ ನಾನು ಹಿಸ್ಸೆಯನ್ನು ಕೇಳಿರುತ್ತೇನೆ.

ದಿನಾಂಕ 20.06.2023 ರಂದು ನಾನು ಚಿಕ್ಕಮಗಳೂರಿನಲ್ಲಿ ವಾಸವಿದ್ದೆ. ಆ ದಿನಾಂಕದಂದು ನಾನು ಪ್ರತಿವಾದಿಗಳನ್ನು ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡಿ ಎಂದು ಕೇಳಿರುವುದಿಲ್ಲ. ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ಜಮೀನಿನ ಪ್ರತವನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯು ನಮ್ಮೆಲ್ಲರ ಹೆಸರಿನಲ್ಲಿ ಜಂಟಿಯಾಗಿರುತ್ತದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.